Rd No B G 155 9-3-1970

SATYAVADI Daily, MYSORE 4 53 rd Year of Publication

Golden Jubilee Celebrated Paper

ಸತ್ಯವಾದಿ

ಸ್ವರ್ಣ ಮಹೋತ್ಸವ ಸೇರಿಬೇರಿಸಿದ ಪತ್ರಿಕೆ

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [ 2 ಪೈಸೆ

# ಭಾರತದಲ್ಲಿ ಸಮಾಜವಾದ ಯಶಸ್ವಿ ಆಗುವುದಿಲ್ಲ

ಖಟ್ಮಂಡು— ಪಶುಪತಿನಾಥ್ ದೇವಾಲಯದಲ್ಲಿ ಶಿವರಾತ್ರಿ ಸಮಾರಂಭಕ್ಕೆ ಬಂದಿದ್ದ ಸಹಸ್ರಗಟ್ಟಲೆ ಭಾರತೀಯರಲ್ಲಿ, ಒಬ್ಬ 90 ವರ್ಷದ ಬಂಗಾಳೀ ಮಹಿಳೆಯು "ಬಂಗಾಳವನ್ನು ನಕ್ಸಲೈಟರಿಂದ, ಪ್ರಗತಿಗಾಮಿಗಳಿಂದ ರಕ್ಷಿಸಲು" ಪಶುಪತಿನಾಥನಲ್ಲಿ ಪ್ರಾರ್ಥನೆ ಸಲ್ಲಿಸಿದಳು.

ಬೆಂಗಳೂರು— ಏಪ್ರಿಲ್ ಪ್ರಥಮ ವಾರದಲ್ಲಿ ಅಥವಾ ಮುಂದಿನ ಶಾಸನಸಭಾ ಕಾಲದಲ್ಲಿ ವಿಧಾನಸೌಧದ ಮುಂದೆ ಕಪ್ಪು ಬಾವುಟ ಪ್ರದರ್ಶಿಸಲು ಭೂ ಮಾಲೀಕರ ಸಂಘ ಯೋಜಿಸಿರುವುದಾಗಿ ಗೊತ್ತಾಗಿದೆ.

ಖಟ್ಮಂಡು— ದೇಲ್ಪಾದಲ್ಲಿ ದಸ್ತಗಿರಿ ಮಾಡಲ್ಪಟ್ಟ 8 ಮಂದಿಯಿಂದ ಭೈರವ ದೇವರ ಅತ್ಯಮೂಲ್ಯ 700 ವರ್ಷಗಳ ಹಿಂದಿನ ವಿಗ್ರಹವೂ ಸೇರಿ ಹಲವು ವಿಗ್ರಹಗಳು ವಶಪಡಿಸಿಕೊಳ್ಳಲಾಯಿತು

ಬೊಂಬಾಯಿ— ಆಂಧೇರಿಯಲ್ಲಿ ಒಂದು ಮಹಡಿ ಮೇಲಿನ ವಾಸದ ಕೋಣೆಯಲ್ಲಿ ಕಸ್ಟಂಸಿನವರು ರೂ 15 ಲಕ್ಷ ಬೆಲೆಯ ಚಿನ್ನವನ್ನು ವಶಪಡಿಸಿಕೊಂಡರು.

ನೇತ್ರದಾನಿ ಪದ್ಮಭೂಷಣ ಡಾ || ಎಂ ಸಿ. ಮೋದಿ ( ಭಾರತ ರಾಷ್ಟ್ರಾಧ್ಯಕ್ಷರಿಗೆ ಗೌ॥ ನೇತ್ರ ಚಿಕಿತ್ಸಕರು) ಗುಲ್ಬರ್ಗಾದಲ್ಲಿ — ತಾ॥ 10 ರಂದು ಕಣ್ಣು ಆಪರೇಷನ್ ಶಿಬಿರ ನಡೆಸುವರು.

ಪಂಜಿ— ಸರಕಾರಿ ಕಚೇರಿಗಳಿಗೆ ಬಿಲ್ ಹಣ ಪಾವತಿ ಮಾಡದಿದ್ದ ಕಾರಣಕ್ಕಾಗಿ ಟೆಲಿಫೋನ್ ಸಂಬಂಧ ಕತ್ತರಿಸಿದ ಅಂಚೇ ತಂತಿ ಇಲಾಖೆಗೆ ಸಂಬಂಧಿಸಿದ ಕಚೇರಿಗಳಿಗೆ ಲೋಕೋಪಯೋಗಿ ಇಲಾಖೆ ನೀರು ಸರಬರಾಜು ಕತ್ತರಿಸಿದೆ.

ಬೆಂಗಳೂರು— ದೇಶದಲ್ಲಿ ಐಕ್ಯತೆಗೆ ಬೆದರಿಕೆ ಒದಗಿದೆಯೆಂದೂ, ಶಿಸ್ತಿನಿಂದ ಇದನ್ನು ಗೆಲ್ಲಬೇಕೆಂದೂ, ತನ್ಮೂಲಕ ಅಪಖ್ಯಾತಿಗೊಳಿಸಿಕೊಂಡಿರುವ ದೇಶದ ಹಿರಿಯರಲ್ಲಿ ಪೈಪೋಟಿ ಮಾಡಬಾರದೆಂದೂ, ಜ್ಯೋತಿ ಬೆಳಗುವ ಮಾರ್ಗದರ್ಶನ ಮಾಡಬೇಕೆಂದೂ ಬೆಂಗಳೂರು ವಿಶ್ವವಿದ್ಯಾನಿಲಯದ ಪದವೀದಾನ ಸಮಾರಂಭದಲ್ಲಿ ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಾಧೀಶರಾದ ಶ್ರೀ ಹಯಾತಲ್ಲಾರವರು ಹೇಳಿದರು.

### ವಜ್ರಮಹೋತ್ಸವ

ಮೈಸೂರು— ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್ಟಿಟ್ಯೂಟಿನ ವಜ್ರ ಮಹೋತ್ಸವವನ್ನು ನಿನ್ನೆ ಉದ್ಘಾಟಿಸುತ್ತಾ, ಗೌರ್ನರ್ ಶ್ರೀ ಧರ್ಮವೀರರವರು, ದೇಶವು ಅಭಿವೃದ್ಧಿಗೊಂಡು ಯುವಕರಿಗೆ ಉದ್ಯೋಗ ದೊರಕಿಸಲು ಕುಶಲಕೈಗಾರಿಕೆ, ಕೆಲಾ, ಚಿಕ್ಕ ಮತ್ತು ಗ್ರಾಮ ಕೈಗಾರಿಕೆಗಳ ಅಭಿವೃದ್ಧಿ ಕಡೆಗೆ ಲಕ್ಷ್ಯಕೊಡಬೇಕೆಂದೂ, ಈ ಕೈಗಾರಿಕೆಗಳಿಗೆ ಭದ್ರವಾದ ಮೂಲವಿದ್ದರೆ ನೈಜವಾದ ಅಭ್ಯುದಯ ಉದಯಿಸುವದೆಂದೂ ಹೇಳಿದರು — ಕೈಗಾರಿಕೆಗಳ ಸ್ಥಾಪನೆಯಲ್ಲಿ ಸುಜ್ಞಾನ, ದೂರದೃಷ್ಟಿ ಹೊಂದಿದ್ದ ಡಾ॥ ವಿಶ್ವೇಶ್ವರಯ್ಯನವರನ್ನು ಪ್ರಶಂಸಿಸಿದರು— ಗೌರ್ನರ್‌ರವರು ಮುನಿಸಿಪಲ್ ನರ್ಸರಿಯಲ್ಲಿ ಗುಲಾಬಿ ತೋಟದಲ್ಲಿ ಈ ಬೆಳಿಗ್ಗೆ ಗುಲಾಬಿ ಸೊಸಿಗಳನ್ನು ನೆಟ್ಟರು.

●

### ಸಂಸ್ಕೃತ ಪಠನ

ರಾಜಕೋಟಿಯಲ್ಲಿ ಮಹಾಶಿವರಾತ್ರಿ ಸಂದರ್ಭದಲ್ಲಿ ನಡೆದ ಮೂರು ದಿನಗಳ ಸಂಸ್ಕೃತ ಪಠಣದಲ್ಲಿ ಹಿಂದೂ, ಮುಸ್ಲಿಂ ಕ್ರಿಶ್ಚಿಯರ್ ಮತ್ತಿತರರು ಒಟ್ಟು 200 ಜನ ಭಾಗವಹಿಸಿದ್ದರು.

★

ಮೈಸೂರು— ಗಡಿ ಸಂಬಂಧದಲ್ಲಿ ತಾ. 13 ರಂದು ಮೈಸೂರು ಬಂದ್ ನಡೆಸಲು ಎಲ್ಲ ಪಕ್ಷಗಳ ಸಭೆ ನಿರ್ಧರಿಸಿದೆ.

★

ಹೈದರಾಬಾದು— ಗ್ರೇಟ್‌ಬ್ರಿಟನ್ನಿನಲ್ಲಿ ಇಂತಹ ಪ್ರಯತ್ನಗಳು ವಿಜಯಗೊಳ್ಳದಿರುವಂತೆ, ಭಾರತದ ಸಂಗಿನ ಸಮಾಜವಾದದ ಪ್ರಯೋಗವು ವಿಜಯಗೊಳ್ಳುವ ಸಂಭವವಿಲ್ಲವೆಂದು ಪ್ರೊ || ಪರ್ಕಿಸ್ ಅಭಿಪ್ರಾಯ ಪಟ್ಟಿರುವರು.

### ಮೈಸೂರು ಶಾಸಕರ ನಿಯೋಗ

ನವದೆಹಲಿ— ಮಹಾರಾಷ್ಟ್ರ ಮುಖ್ಯ ಮಂತ್ರಿ ನಾಯಿಕರ ಇಲ್ಲಿಯ ಕಾರ್ಯಾನಂತರ ಇಲ್ಲಿಗೆ ಮಹಾರ್ಜ ಕಮಿಷ್ಣರದಿಯನ್ನು ಪೂರ್ಣವಾಗಿ ಜಾರಿಗೆ ತರಲು ಒತ್ತಾಯ ಮಾಡುವದಕ್ಕೆ 16 ಮಂದಿ ಮೈಸೂರು ಶಾಸಕರ ನಿಯೋಗವು ನಿನ್ನೆ ಬಂದಿತು.

○

### ಗಡಿ ಚಳವಳಿ

ಬೆಂಗಳೂರು— ಕನ್ನಡ ಚಳವಳಿಗಾರರ ಒಂದು ತಂಡವು ಮಹಾರ್ಜ ಕಮಿಷ್ಣರವರದಿ ಜಾರಿಗೆ ತರಬೇಕೆಂದು ಒತ್ತಾಯ ಮಾಡಲು ಮಾವಳ್ಳಿಯಿಂದ ಮೈಸೂರು ಬ್ಯಾಂಕು ಸರ್ಕಲ್ ವರೆಗೆ ಭಿತ್ತಿಪತ್ರ ಹಿಡಿದು ಘೋಷಣೆ ಕೂಗುತ್ತಾ ಮೆರವಣಿಗೆ ನಡೆಸಿದರು — ಪ್ರಧಾನಿ, ಭಾರತ ಗೃಹ ಮಂತ್ರಿ, ಮಹಾರಾಷ್ಟ್ರ ಮುಖ್ಯ ಮಂತ್ರಿ, ರಾಜ್ಯದ ಹೊಸ ಕಾಂಗ್ರೆಸ್ಸು ನಾಯಕರ ಪ್ರತಿರೂಪಸನ್ನು ಡಿಸ್ಟ್ರಿಕ್ಟ್ ಆಫೀಸು ಕಾಂಪೌಂಡಿನಲ್ಲಿ ಸುಟ್ಟರು.

★

### ಪಾಕಿಸ್ತಾನಕ್ಕೆ ರಷ್ಯಾ ಟ್ಯಾಂಕುಗಳು

ವಾಷಿಂಗ್ಟನ್— ಪಾಕಿಸ್ತಾನವು ರಷ್ಯಾ ದೊಡನೆಯ ಹೊಸ ಒಪ್ಪಂದ ರೀತ್ಯಾ ಅಲ್ಲಿಯ 250 ಟ್ಯಾಂಕುಗಳನ್ನು ಪಡೆದಿರುವದೆಂದು ಲಾಸ್ ಏಂಜಲ್ಸ್ ಟೈಂಸ್ ಪ್ರಕಟಿಸಿದೆ.

★

ನವದೆಹಲಿ— ಜಮ್ಮು ಹತ್ತಿರದಲ್ಲಿನ ಸುರ್ಸಿಸಾರ್ ಸಮೀಪದಲ್ಲಿ ಏಷ್ಯಾದಲ್ಲೇ ಅತಿ ಆಳವಾದ, ಸುಮಾರು 6000 ಮೀಟರು ಆಳದ ಭೂವಿ ಕೊರೆಯುವದು ತಾ || ರಿಂದ ಪ್ರಾರಂಭಿಸಲಾಗುವುದು.

ವುಡ್‌ಲ್ಯಾಂಡ್ಸ್ ಚಿತ್ರ ಜನಸಂದಣಿಯ 10ನೇ ವಾರ
ಅಮೋಘ ಪ್ರಾರಂಭ
ಗೆಜ್ಜೆಪೂಜೆ
ನಟವರ್ಗ— ಕಲ್ಪನ, ಅಶ್ವತ್ಥ್, ಬಾಲಕೃಷ್ಣ, ಪಂಡರಿಬಾಯಿ

ಆಪೆದಾ— ಅಮೋಘ 2 ವಾರ
.... ಮನಮೋಹಕ ತಮಿಳು ಚಿತ್ರ ....
ಇರು ಕೋಡುಗಳ
ಜೆಮಿನಿ ಗಣೇಶ್, ತಾಯ್ ನಾಗೇಶ್ ಮತ್ತು ಸಾವುಕಾರ್ ಜಾನಕಿ ಅಭಿನಯ

ಆಕಸ್ಮಿಕವೋ, ಅದೃಷ್ಟವೋ, ದೇವರ ಮಹಿಮೆಯೋ ?

ಸ್ಪೆಕ್ಟೇಟರ್ ಪತ್ರಿಕೆಯಲ್ಲಿ ಜಾರ್ಜ್ ರೋಮರ್ ವಿಲ್ಸ್ಸರು ಕೆಲವು ದಿನಗಳ ಹಿಂದೆ ಬರೆದ ವಿಷಯವಿದು -

ಬಹುಕಾಲದಿಂದ ಸೊಂಟನೋವಿನಿಂದ ನರಳುತ್ತಿದ್ದ, ನಾನು ಬಲ್ಲ ಒಬ್ಬ ಮನುಷ್ಯನು, ಈ ಉಪದ್ರವದಿಂದ ಪಾರಾಗಲು ಅನೇಕ ವರ್ಷಗಳು ವಿವಿಧ ಮತ್ತು ಬಹಳ ಚಿಕಿತ್ಸೆಗಳನ್ನೂ ಮಾಡಿಸಿದನು, ಪ್ರಯೋಜನವಾಗಲಿಲ್ಲ. ಅವನ ಬೆನ್ನು ಬಗ್ಗಿದ್ದು, ಕೋಲೂರಿಕೊಂಡೇ ನುತ್ತಾಡುತ್ತಿದ್ದದು. ಹೀಗಿರುವಾಗ ಆತನು ಒಂದು ಬಸ್ಸಿನಲ್ಲಿ ಸಂಚರಿಸುತ್ತಿದ್ದನು ; ಡ್ರೈವರು ಏಕಾಏಕಿ ಬ್ರೇಕ್ ಹಾಕಿದಾಗ ಈ ನನ್ನ ಮಿತ್ರನು ಬಸ್ಸಿನಲ್ಲಿ ಬಿದ್ದನು : ಆಗ ಇವನ ಬೆನ್ನಿಗೆ ಕಂಡೆಕ್ಟರಿನ ಟಿಕೇಟು ಮಿಷನ್ನಿಂದ ಭೀಕರವಾಗಿ ಗುದ್ದು ಹೊಡೆದಂತಾಯಿತು ; ಆ ಕೂಡಲೇ ಅವನ ಬೆನ್ನು ನೋವು ಮಾಯವಾಯಿತು. ನಂತರ ಕೈಲಿ ಕೋಲಿಲ್ಲದೆ ಒಬ್ಬನಿಂದ ಇಳಿದು ಸುಖವಾಗಿ ಸಲೀಸಾಗಿ ನಡೆದುಕೊಂಡು ಹೋದನು. ಎಂತಹ ಆಶ್ಚರ್ಯ !

★

ಅಮೇರಿಕಾದಲ್ಲಿ ಆದಾಯ ತೆರಿಗೆ ಕೊಡುವವರು

ಅಮೇರಿಕಾದಲ್ಲಿ ಕಳೆದವರ್ಷ 112 ಮಿಲಿಯ ಆದಾಯ ತೆರಿಗೆ ಕೊಡುವವರಿದ್ದರೆಂದೂ, 188000 ಮಿಲಿಯ ಡಾಲರು ಶೇಖರಿಸಲ್ಪಟ್ಟಿತೆಂದೂ ಪ್ರಕಟವಾಗಿದೆ : 1970 ರಲ್ಲಿ 113 ಮಿಲಿಯ ತೆರಿಗೆ ಕೊಡುವವರೂ 200000 ಮಿಲಿಯ ಡಾಲರು ವಸೂಲಾಗುವ ನಿರೀಕ್ಷೆಯೂ ಇದೆ ಎನ್ನಲಾಗಿದೆ.

ಮನನಾರ್ಹ ವಿಷಯಗಳು

ಮನುಷ್ಯನು ವಿಶೇಷವಾಗಿ ನುಡಿದುದನ್ನು ನಡೆಸಲಾರದವನೂ, ಹಿಡಿದುದನ್ನು ಮುಗಿಸಲಾರದವನೂ ಆಗಿದ್ದಾನೆ.

ಜೀವರಕ್ಷಣೆಯೂ, ಜೀವಹಿಂಸೆಯೂ ಅಧೀನಸ್ಥಿತಿಯಲ್ಲಿ ಉಂಟಾಗುವುದೊಂದೇ ಮಾರ್ಗವಾಗಿದೆ : ಜೀವರಕ್ಷಣೆಯು ಜೀವಹಿಂಸೆಗೆ ಕಾರಣವಾದಾಗ ಅಹಿಂಸೆ ಎಂಬ ಮಾತಿಗೆ ಅವಕಾಶ ತಪ್ಪಿ ಹೋಗುವುದು.


## All India Blind Welfare Week

( Shiva Chaturdasi Week )

.... 6 th to 12 th March 1970 ....

FLAG DAY on 11 th March 1970

— Donate Generously for the cause of the Blind —

Sponsored by :

Net ji Eye & General Hospital

P. O. Ramachandrapur Ashram Dist Purulia ( W. B )



ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ

ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ

ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ

ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 10-65

ಸೋಮವಾರ ಸಂಚಿಕೆ ವರ್ಷಕ್ಕೆ ರೂ 2



Quality Printing — Neat Binding

## Lakshminarasimha Press

Sivarampet, Mysore



# ದೇಶದ ಹಿತಕ್ಕಾಗಿ

# ಕುಟುಂಬ ಯೋಜನೆ



# SHAKTI SUDHA

## A Superb Tonic



## Help The Gorakshana



## Protect the Cow

ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಿಗಾಗಿ ನಡೆಯಲಿ

ಗೋರಕ್ಷಣಕ್ಕೆ ಬೆಂಬಲ ನೀಡಿ



# ಅಖಿಲ ಭಾರತದಲ್ಲಿ ಕೂಡಲೇ

# ಗೋವಧೆ ನಿಷೇಧವಾಗಲಿ



ಗೋರಕ್ಷಣಕ್ಕೆ ಚಂದಾ ಮತ್ತು ಡೊನೇಷನ್ ಕಾವತಿಮಾಡುವ ಅಡ್ರೆಸ್

1 ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರ ಸಭಾ
ಹೊಂಗನೂರು, ಚಾಮರಾಜನಗರ ತಾಲ್ಲೂಕ

2 ಶ್ರೀ ಬಿ ಜಿ ಶಾಸ್ತ್ರಿ ಆಫರ್ ಮತ್ತು ಅಸ್ಸ್ಟಾಲಜರ್, 180 ನ್ಯೂ ಬ್ಲಾಕ್,
ವಿದ್ಯಾರಣ್ಯಪುರಂ, ಮೈಸೂರು.

3. ಡಾ || ಪಿ ಎಸ್ ನಾರಾಯಣ್, ಮತ್ತು ಪಿ ಎಸ್. ವಿಶ್ವನಾಥ್,
ಪ್ರಾಣಿಡಯಾ ಪ್ರಚಾರಕರು, 320 – 5 ನೆ ಬ್ಲಾಕ್, ಜಯನಗರ, ಬೆಂಗಳೂರು

4 ಗೋರಕ್ಷಣ ಆಫೀಸ್ ಸತ್ಯವಾದಿ ಪ್ರೆಸ್ ಚಾಮರಾಜಪುರಂ, ಮೈಸೂರು 4

Edited Printed & Published by Dharmaprachara Nirata
M. S. Krishna Rao ( Proprietor ) at the Satyavadi Press
Chamarajapuram, Mysore 4